ಅ) ಕೊಡಗು ಜಿಲ್ಲೆಗೆ ಅತಿವೃಷ್ಟಿ ಹಾನಿಗೆ ಪರಿಹಾರವಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? ಅದರಲ್ಲಿ ವೈಯಕ್ತಿಕ ಪರಿಹಾರದ ಹಣ ಎಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) 1996-97ನೇ ಸಾಲಿನಲ್ಲಿ ಕೊಡಗು ಜಿಲ್ಲೆಗೆ ಅತಿವೃಷ್ಟಿ ಹಾನಿಗೆ ಪರಿಹಾರವಾಗಿ ರೂ.125.00 ಲಕ್ಷಗಳನ್ನು 'ಸಿಆರ್‌ಎಫ್' ನಿಂದ ಬಿಡುಗಡೆ ಮಾಡಿದೆ. ಇದರಲ್ಲಿ ವೈಯಕ್ತಿಕ ಪರಿಹಾರಕ್ಕಾಗಿ ರೂ.10.00ಲಕ್ಷಗಳು ಹಾಗೂ ಕಾಮಗಾರಿಗಳ ದುರಸ್ಥಿಗಾಗಿ ರೂ.125.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು ನಿಗಧಿ ಪಡಿಸಿರುತ್ತಾರೆ. ಈ ಪೈಕಿ ಖಾಸಗಿ ಆಸ್ತಿ ಹಾನಿಗೆ ರೂ.9.26 ಲಕ್ಷಗಳನ್ನು ಪರಿಹಾರವಾಗಿ ನೀಡಲಾಗಿದೆ ಹಾಗೂ ಕಾಮಗಾರಿಗಳಿಗೆ ಸಂಬಂಧಿಸಿದಂತೆ ರೂ. 122.34 ಲಕ್ಷಗಳಿಗೆ ದಿನಾಂಕ 15-3-97ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ, ಜಿಲ್ಲಾಧಿಕಾರಿಗಳು ದಿನಾಂಕ 19-3-97ರಲ್ಲಿ ರೂ.64.49 ಲಕ್ಷಗಳನ್ನು ಜಿಲ್ಲಾ ಪಂಚಾಯತ್‌ಗೆ ಬಿಡುಗಡೆ ಮಾಡಿದ್ದಾರೆ. ತಾಲ್ಲೂಕುವಾರು ವಿವರ ಹೀಗಿದೆ :-

(ರೂ. ಲಕ್ಷಗಳಲ್ಲಿ)

ತಾಲ್ಲೂಕಿನ ಹೆಸರು	ವೈಯಕ್ತಿಕ ಪರಹಾರಕ್ಕೆ ನೀಡಿದ ಹಣ	ಕಾಮಗಾರಿಗಳ ದುರಸ್ಥಿ	
		ಆಡಳಿತಾತ್ಮಕ ಅನುಮೋದನೆ ನೀಡಿರುವ ಮೊತ್ತ	ಜಿ.ಪ.ಗೆ ಒದಗಿಸಿದ ಹಣ
ಮಡಿಕೇರಿ	4.12	51.66	14.67
ವಿರಾಜಪೇಟೆ	1.59	49.90	43.82
ಸೋಮವಾರಪೇಟೆ	3.55	20.78	6.00
ಒಟ್ಟು	**9.26**	**122.34**	**64.49**

ಸೋಮವಾರಪೇಟೆ ತಾಲ್ಲೂಕಿನ ಮಾದಾಪುರದ ತೋಟಗಾರಿಕೆ

978 - ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರಪೇಟೆ, ತಾಲ್ಲೂಕಿನ ಮಾದಾಪುರಕ್ಕೆ ತೋಟಗಾರಿಕೆ ಇಲಾಖೆಗೆ ಸೇರಿದ ಜಾಗ ಎಷ್ಟು ಎಕರೆ ಇದೆ? ಅದರಲ್ಲಿ ಎಷ್ಟು ಜಮೀನಿನಲ್ಲಿ ಕೃಷಿ ಮಾಡಲಾಗಿದೆ? ಎಷ್ಟು ಬಾಕಿ ಇದೆ?

ಅ) ಈ ಇಲಾಖೆಗೆ ಸರ್ಕಾರದ ವತಿಯಿಂದ ಕಳೆದ 1995-96ರಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಮಡಿಕೇರಿ ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಮಾದಾಪುರ ತೋಟಗಾರಿಕೆ ಕ್ಷೇತ್ರದ ಒಟ್ಟು ವಿಸ್ತೀರ್ಣ 234.20 ಎಕರೆ ಪ್ರದೇಶವಿದ್ದು, ಇದರ ಪೈಕಿ ಈಗ 120.00 ಎಕರೆ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗಿದೆ. ಹಾಗೂ 114.20 ಎಕರೆ ಅಭಿವೃದ್ಧಿಪಡಿಸಬೇಕಾಗಿದೆ.

ಆ) ಈ ಕ್ಷೇತ್ರಕ್ಕೆ 1995-96ನೇ ಸಾಲಿನಲ್ಲಿ ರೂ.12,37,187-00 ಗಳನ್ನು (ಸಿಬ್ಬಂದಿ ವೇತನವೂ ಸೇರಿ) ಖರ್ಚು ಮಾಡಲಾಗಿದೆ.

ಆಶ್ರಯ ಯೋಜನೆಯಡಿ ಮನೆ ನಿವೇಶನ

980 - ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಚಾಮರಾಜ ಕ್ಷೇತ್ರದ ಆಶ್ರಯ ಯೋಜನೆಯಡಿ ಮನೆ ನಿವೇಶನ ನೀಡಬೇಕೆಂದು ಕೋರಿ ಬಂದಿರುವ ಅರ್ಜಿಗಳೆಷ್ಟು? ಇವುಗಳಲ್ಲಿ ಆಯ್ಕೆಯಾಗಿರುವ ಫಲಾನುಭವಿಗಳೆಷ್ಟು?

ಆ) ಈಗ ಎಷ್ಟು ಮನೆಗಳು ಪೂರ್ಣಗೊಂಡಿವೆ? ಎಲ್ಲೆಲ್ಲಿ? ಹಾಲಿ ಈಗ ಎಷ್ಟು ಮಂದಿಗೆ ಮನೆ ನಿವೇಶನ ನೀಡಲಾಗಿದೆ?

ಇ) ಮುಂದೆ ಉಳಿದ ಫಲಾನುಭವಿಗಳಿಗೆ ಮನೆ ನಿವೇಶನ ನೀಡಲು ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದೆಯೇ?

ಈ) ಇನ್ನುಳಿದ ಫಲಾನುಭವಿಗಳಿಗೆ ಮನೆ ನಿವೇಶನ ಯಾವಾಗ ನೀಡಲಾಗುವುದು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು) :

ಅ) (1) ಕೋರಿ ಬಂದ ಅರ್ಜಿಗಳು 10561

(2) ಆಯ್ಕೆ ಆಗಿರುವ ಫಲಾನುಭವಿಗಳು 1000

ಆ) 560 ಮನೆಗಳು ಪೂರ್ಣಗೊಂಡಿವೆ. ನಿವೇಶನ ಯಾರಿಗೂ ನೀಡಿಲ್ಲ.